ಮೊಂಡ ಮೂಗು, ಉದ್ದದ ಕತ್ತು, ನೀಳ ಕಾಯಕ್ಕೆ ತುಸು ದೊಡ್ಡದೇ ಎನ್ನಿಸುವ ಮೊಲೆಗಳ ಮೇಲ್ಭಾಗದ ಉಬ್ಬಿದೆದೆ, ಕೆಳಗೆ ತೊಡೆ ಮಾತ್ರ ತೋರ ಎನ್ನಿಸುವ ನೀಳ ಕಾಲುಗಳು, ಎತ್ತರದ ದೊಡ್ಡ ದೇಹಕ್ಕೆ ಅನುಪಾತವಲ್ಲದ ಪುಟ್ಟ ಪಾದಗಳು.

ಅವಳ ಮುಖವನ್ನೇ ನೋಡುತ್ತಾ 'ಅದೇನು!?' ಎಂದ ಶ್ರೀನಿಧಿ.

ಅವಳ ಗಲಿಬಿಲಿ ಕಂಡು 'ನಿನ್ನ ಎದೆಯ ಮೇಲೆ ಅವೆಷ್ಟು ಕಲೆಗಳು!?' ಎಂದು ಉದ್ಗರಿಸಿದ. ಕ್ಯಾಥರೀನ್ ನೋವಿನಲ್ಲೆಂಬಂತೆ ನಕ್ಕಳು. 'ನಿಮ್ಮ ದೇಶದಲ್ಲಿ ಭೂಮಿ ಆಳಿದ ರಾಜರೆಲ್ಲಾ ತಮ್ಮ ಆಳ್ವಿಕೆಯ ನೆನಪಿಗೆ ಶಾಸನ ಕೆತ್ತಿಸಿರ್ತಾರೆ ಅಂತಿದ್ದೆಯಲ್ಲ. ಈ ಭೂಮಿ ಆಳಿದ್ದ ಅಂತಹವರ ಉಗುರು ಹಲ್ಲುಗಳು ಮೂಡಿಸಿದ್ದ ಶಾಸನಗಳು!' ಎನ್ನುತ್ತಾ ನಕ್ಕಳು. ಶ್ರೀನಿಧಿ ನಗಲಿಲ್ಲ.

ಸ್ನಾನ ಮುಗಿಸಿ ಬಂದ ನಂತರವೂ ಶ್ರೀನಿಧಿ ಮುಖದಲ್ಲಿ ಅದೇ ಪ್ರಶ್ನೆ ಇದೆ ಅನ್ನಿಸಿ ಕ್ಯಾಥರೀನ್ ತಾನೇ ಹೇಳತೊಡಗಿದಳು: 'ಈ ಶಾಸನಗಳು ತುಂಬಾ ಹಳೆಯವು. ಅವರುಗಳು ತಮ್ಮ ಹಲ್ಲು ಊರಿದ್ದಾಗ ತೀರಾ ಎಳೆಯವಾಗಿದ್ದ ನನ್ನ ಮೊಲೆಗಳಲ್ಲಿ ಗಾಯ ಆಗಿ ಎಷ್ಟೋ ಬಾರಿ ರಕ್ತ ಜಿನುಗಿತ್ತು! ಅಂತಹ ಗಾಯಗಳು, ರಕ್ತ ಒಳಗೇ ಹೆಪ್ಪುಗಟ್ಟಿ ಕೆಂಪಾದ ಗುರುತುಗಳು ಕ್ರಮೇಣ ಹಸಿರಾಗಿ ಈಗ ಕಂದಾಗಿವೆ'

ಶ್ರೀನಿಧಿಗೆ ಏನೂ ಅರ್ಥವಾಗಲಿಲ್ಲ. ಕ್ಯಾಥರೀನ್‌ಳೇ ಮುಂದುವರೆಸಿದಳು: 'ನನ್ನಮ್ಮ ತೈವಾನ್‌ನವಳು. ಅವಳ ಹೆಸರು ಆರ್ಪಾ ಅಂತ. ನಮ್ಮಪ್ಪ ಆಸ್ಟ್ರೇಲಿಯನ್. ಅವರು ಏಷ್ಯಾ ಖಂಡದ ಪ್ರವಾಸಕ್ಕೆ ಬಂದಿದ್ದಾಗ ಮಸಾಜ್ ಸೆಂಟರಿನಲ್ಲಿ ಪರಸ್ಪರ ಪರಿಚಯವಾಗಿತ್ತಂತೆ. ನನ್ನಮ್ಮ ಆಗಿನ್ನೂ ಹದಿಹರೆಯದ ಹುಡುಗಿ, ಸುಂದರಿ ಅಷ್ಟೇ ಅಲ್ಲ ಮಸಾಜ್ ಮಾಡುವುದರಲ್ಲಿ ತುಂಬಾ ಚಾಣಾಕ್ಷ ಪರಿಣಿತಿ ಪಡೆದವಳು. ನನ್ನ ಅಪ್ಪ ಮಾರುಹೋಗಿದ್ದು ಯಾವುದಕ್ಕೋ ಗೊತ್ತಿಲ್ಲ. ಅಂತೂ ಅಪ್ಪ ಸಿಡ್ನಿಯಲ್ಲಿ ಆರಂಭಿಸಿದ್ದ ಹೊಸ ಸ್ಪಾ ಒಂದಕ್ಕೆ ಅಮ್ಮ ಬಂದು ಮಸಾಜರ್ ಆಗಿ ಸೇರಿದ್ದಳು. ಕೆಲ ಕಾಲದಲ್ಲೇ ಅಪ್ಪನ ಸ್ಪಾ ಹೆಸರುವಾಸಿ ಆಯ್ತಂತೆ. ಎಲ್ಲಾ ಅಮ್ಮನ ದೆಸೆ ಅಂತ ಹೇಳುತ್ತಿದ್ದ ಅಪ್ಪ ಅಮ್ಮನನ್ನು ಚರ್ಚಿನಲ್ಲಿ ಮದುವೆ ಆದರು. ನನ್ನಮ್ಮ ಬುದ್ದಿಸ್ಟ್. ಅಪ್ಪ ಕ್ರಿಶ್ಚಿಯನ್. ಇದು ಅವರ ನಡುವೆ ಸಮಸ್ಯೆಯೇ ಆಗಿರಲಿಲ್ಲ. ನಾನು ಹುಟ್ಟಿದ ಮೇಲೆ ಅಮ್ಮ ನನಗೆ 'ಚರಿಯಾ' ಎಂದು ಹೆಸರಿಟ್ಟು ಕರೆಯತೊಡಗಿದ್ದರೆ ಅಪ್ಪ 'ಕ್ಯಾಥರೀನ್' ಎಂಬ ಅವರಮ್ಮನ ಹೆಸರಿಟ್ಟು ಮುದ್ದಿಸುತ್ತಿದ್ದರು. ಸ್ಪಾ ನಡೆಸುವ ಪೂರ್ಣ ಜವಾಬ್ದಾರಿ ಹೊತ್ತ ಅಮ್ಮ ಬಿಡುವಿಲ್ಲದಂತಾದರೆ ಕ್ಯಾಸಿನೊ ಆರಂಭಿಸಿದ್ದ ಅಪ್ಪ ಮನೆಗೆ ಬರುವುದೂ ಅಪರೂಪವಾಗಿತ್ತು. ಮನೆಗೆ ಬಂದರೂ ಅಪ್ಪ ಅಮ್ಮನದು ನಿರಂತರ ಜಗಳ! 'ನಾನು ಹೇಳಿದಂತೆ ಕೇಳು. ತುಂಬಾ ದುಡ್ಡು ಸಿಗ್ತದೆ' ಎಂದು ಅಪ್ಪ ಹೇಳಿದರೆ 'ನಾನು ಮಾಡೋದು ಮಸಾಜ್ ಮಾತ್ರ, ವೇಶ್ಯಾವಾಟಿಕೆ ಅಲ್ಲ' ಅಂತ ಅಮ್ಮ ಖಡಕ್ಕಾಗಿ ಹೇಳಿ ಮೌನವಾಗುತ್ತಿದ್ದಳು. ಜಗಳದ ಆರ್ಭಟ, ಮಾತಿಲ್ಲದ ಮೌನಗಳೇ ಆ ಮನೆಯನ್ನು ಆಳುತ್ತಿದ್ದಾಗ ನಾನು ಇಲಿ ಮರಿಯಂತೆ ಗೂಡಿನಲ್ಲಿ ಅಡಗಿಯೇ ಬೆಳೆಯುತ್ತಿದ್ದೆ. ನಾನು ಅಡಗಬಹುದು, ಬೆಳೆಯುತ್ತಿರುವ ದೇಹ, ಕಿಶೋರತ್ವ ಉಡುಗೀತೇ!? ನನ್ನ ಎದೆಯ ಮೇಲೆ ಚಿಟಗುಬ್ಬಿ ಗೂಡು ಕಟ್ಟಿದಾಗ ಅಪ್ಪ 'ನೀನು ಒಪ್ಪದಿದ್ದರೆ ಬೇಡ, ನನ್ನ ಮಗಳನ್ನು ಮಸಾಜಿಗೆ ಕರೆದುಕೊಂಡು ಹೋಗ್ತೇನೆ' ಎಂದು ಅಮ್ಮನನ್ನು ಹೆದರಿಸತೊಡಗಿದ್ದರು. ಅಮ್ಮ ಮೊದಮೊದಲು ನಿರಾಕರಿಸಿದರೂ, ಅಪ್ಪನ ಕಣ್ಣಿಗೆ ನಾನು ಬೀಳದಂತೆ ಮುಚ್ಚಿಡಲಾಗದೇ ಸೋತು ತಾನೇ ಅಪ್ಪ ಬಯಸಿದಂತೆ ಹೊಸ ರೀತಿಯ ಮಸಾಜ್ ಮಾಡುತ್ತಾ, ಅಪ್ಪನಿಗೆ ತುಂಬಾ ದುಡ್ಡು ಕೊಡತೊಡಗಿದಳು.

ಅಮ್ಮನಿಗೆ ಸರ್ವೈಕಲ್ ಕ್ಯಾನ್ಸರ್ ಆಗಿ ತೀರಿಕೊಳ್ಳುವವರೆಗೆ ಎಲ್ಲವೂ ಹೀಗೇ ನಡೆಯುತ್ತಿತ್ತು. ಅಮ್ಮ ಸತ್ತಾಗ ನಾನು ಸೆಕೆಂಡರಿ ಸ್ಕೂಲ್‌ನಲ್ಲಿದ್ದೆ. ಅಪ್ಪ ನನ್ನನ್ನು ತಮ್ಮ ಸ್ಪಾದಲ್ಲಿ ಮಸಾಜ್ ಮಾಡಲು ಬಳಸತೊಡಗಿದ್ದರು. ನಾನೋ ಅದರಲ್ಲೂ ಎಳಸು. ಅಮ್ಮನಿಂದ ಕಲಿತ ಚೂರುಪಾರು ಮಸಾಜನ್ನು ಅವರೆಗೆ ನಾನು ಹೆಂಗಸರಿಗೆ ಮಾತ್ರ ಮಾಡುತ್ತಿದ್ದೆ. ಈಗ ಗಂಡಸರಿಗೂ ಮಾಡಬೇಕಾಯ್ತು. ನಾನು ಗಂಡಸಿನ ಪೂರ್ಣ ಬೆತ್ತಲೆ ದೇಹ ನೋಡಿದ್ದೇ ಆಗ. ಆ ದೇಹಗಳ ತುಂಬು ಮಾಂಸಖಂಡಗಳ ತೋಳ್ತೊಡೆಗಳ ಮಸಾಜ್ ಮಾಡುತ್ತಾ ಅವರ ಅಂಗಕ್ಕೆ ತೈವಾನಿ ತೈಲದಿಂದ ಮರಗಟ್ಟಿಸಬೇಕಿತ್ತು. ಅದರ ಅರಿವಳಿಕೆ ಅವಧಿ ಮುಗಿದು ಮತ್ತೆ ಅರಿವಿಗೆ ಮರಳುವವರೆಗಿನ ಕದನಗಳಲ್ಲಿ ನನ್ನ ಪುಟ್ಟ ದೇಹವೂ ನುಜ್ಜುಗುಜ್ಜಾಗಿ ಈ